# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 4213 / 2022

ಪಿರ್ಯಾದುದಾರರು : ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿ : ಪ್ರದೀಪ್ ಕುಮಾರ್ ಬಿನ್‌ಲೇಟ್‌ರೇಣುಕಪ್ಪ**
**29 ವರ್ಷಗಳು, ಚೌಡಿಬೇಗೂರು ಗ್ರಾಮ**
**ಕುದೂರು ಹೋಬಳಿ, ಮಾಗಡಿ ತಾಲ್ಲೂಕು.**

## <u>ದೋಷರೋಪಣೆ</u>

( ಶ್ರೀಮತಿ.ಧನಲಕ್ಷ್ಮಿ. ಎಂ, ಬಿ.ಎ.ಎಲ್, ಎಲ್‌ಎಲ್‌ಬಿ, ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ )

ದಿನಾಂಕ: 06-04-2022 ರಂದು ಸಂಜೆ 6.15 ಗಂಟೆಯ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ವಿಚಾರವೇನೆಂದರೆ ಚಾಸಾ-1 : ನಾಗರತ್ನ ಚೌಡಿಬೇಗೂರು ಗ್ರಾಮದ ನಿವಾಸಿಯಾಗಿದ್ದು, ಆರೋಪಿಯಾದ ನೀವು ಚಾಸಾ-1 ರವರ ಜೊತೆ ಸಂಬಂಧವಿಟ್ಟುಕೊಂಡು ಸಲಿಗೆ ಬೆಳೆಸಿಕೊಂಡಿದ್ದು, ಆರೋಪಿಯಾದ ನೀವು ಚಾಸಾ-1 ರವರಿಗೆ ನಮ್ಮಿಬ್ಬರ ಸಂಬಂಧ ವಿಚಾರವನ್ನು ನಿನ್ನ ಗಂಡನಿಗೆ ಹೇಳುತ್ತೇನೆ ಎಂದು ಹೆದರಿಸಿ ಚಾಸಾ-1 ರವರಿಂದ ಒಂದು ಚಿನ್ನದ ಮಾಂಗಲ್ಯ ಚೈನ್ 40.2 ಗ್ರಾಂ, ಒಂದು ಜೊತೆ ಚಿನ್ನದ ಕಿವಿ ಓಲೆ 8.2 ಗ್ರಾಂ, ಚಿನ್ನದ ನೆಕ್ಲೇಸ್ 24.5 ಗ್ರಾಂ, ಒಂದು ಚಿನ್ನದ ಸರ 16.7 ಗ್ರಾಂ, ಒಂದು ಜೊತೆ ಚಿನ್ನದ ಕಿವಿ ಓಲೆ 4 ಗ್ರಾಂ, 3 ಚಿನ್ನದ ಉಂಗುರಗಳು 12.7 ಗ್ರಾಂ, 3 ಡ್ರಾಪ್ಸ್ 1.9 ಗ್ರಾಂ ತೂಕ, ಚಿಕ್ಕ ಮಕ್ಕಳ ಚಿನ್ನದ ರಿಂಗ್, ಚಿನ್ನದ ಕೆನ್ನೆಯ ಚೈನ್ 6.800 ಗ್ರಾಂ, ಚಿನ್ನದ ಅವಲಕ್ಕಿ ಸರ 38.6 ಗ್ರಾಂ ತೂಕ ಒಡವೆಗಳನ್ನು ಹಾಗೂ ಒಂದುವರೆ ಲಕ್ಷ ನಗದು ಹಣವನ್ನು

ಸುಲಿಗೆ ಮಾಡಿರುವುದು ತನಿಖೆಯಿಂದ ದೃಢಪಟ್ಟಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-384 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?

**ಆರೋಪಿ ಉತ್ತರ ಃ**

ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿರೋ ?

**ಆರೋಪಿ ಉತ್ತರ ಃ**

ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಹೇಳಿ, ವಿವರಿಸಿ, ಅವನ ಸಹಿಯನ್ನು ಪಡೆಯಲಾಗಿದೆ ಎಂದು ದೃಢೀಕರಿಸಿದ್ದೇನೆ.

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ )

( ಧನಲಕ್ಷ್ಮೀ ಎಂ )
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.